ಇ) ಹೆಗ್ಗಡದೇವನಕೋಟೆ ಹುಣಸೂರು ಮಾರ್ಗದ ರಸ್ತೆಯಲ್ಲಿ ಸರ್ವೆ ನಂ. ೧೮೮ ಮತ್ತು ಮತ್ತು ೧೬೬.೪ರಲ್ಲಿ ೧೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ತೆಗೆದುಕೊಂಡಿದೆ. ಈ ವಿಷಯದಲ್ಲಿ ಕಂದಾಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಕಂದಾಯ ಇಲಾಖೆ ಭೂ ಸ್ವಾಧೀನ ಕೊಟ್ಟ ನಂತರ ಸದರಿ ಕಾಲೇಜಿನ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಆಗ್ರೋ ಇಂಡಸ್ಟ್ರೀಯಲ್ ಕಾರ್ಪೊರೇಷನ್ ಅಗ್ರಿಕಲ್ಚರ್ ಇಂಜಿನಿಯರಿಂಗ್ ಮಂಡ್ಯ ಇವರ ಅಧಿಕಾರ ದುರುಪಯೋಗದ ಬಗ್ಗೆ

೩೫೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯದಲ್ಲಿರುವ ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಇಲಾಖೆಯಲ್ಲಿನ ಕೃಷಿ ಇಂಜಿನಿಯರ್‌ರವರು ಅಧಿಕಾರ ದುರುಪಯೋಗ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಮೈಸೂರು ವಿಭಾಗದ ಕೃಷಿ ವಿಭಾಗೀಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪತ್ರ ಬರೆದಿರುವುದು ನಿಜವೇ ?

ಇ) ರೇಷ್ಮೆ ಬೆಳಗಾರರು ಹಾಗೂ ಹರಿಜನ ರೈತರು ಸಾಮೂಹಿಕ ನೀರಾವರಿ ಸಹಕಾರ ಸಂಘ ನಿಯಮಿತ ಶೆಟ್ಟಿಹಳ್ಳಿ, ಮಂಳವಳ್ಳಿ ತಾಲ್ಲೂಕು ಇವರುಗಳು ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿರುವುದು ನಿಜವೇ ?

ಈ) ಹಾಗಿದ್ದಲ್ಲಿ, ಆ ಅಧಿಕಾರಿಯ ವಿರುದ್ಧ ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.

ಆ) ಸರ್ಕಾರಕ್ಕೆ ಪತ್ರ ಬರೆದಿಲ್ಲ.

ಇ) ರೇಷ್ಮೆ ಬೆಳಿಗಾರರು ಮತ್ತು ಹರಿಜನ ರೈತರು ಸಾಮೂಹಿಕ ನೀರಾವರಿ ಸಹಕಾರ ಸಂಘ, ಶೆಟ್ಟಿಹಳ್ಳಿ. ಮಂಳವಳ್ಳಿ ತಾಲ್ಲೂಕು ಇವರಿಂದ ಯಾವುದೇ ಮನವಿಯು ಬಂದಿರುವುದಿಲ್ಲ. ಆದರೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಮತ್ತು ಅದರ ಅಧೀನ ನಿಗಮಂಗಳ ಹರಿಜನ ಮತ್ತು ಗಿರಿಜನ ನೌಕರರ ಕ್ಷೇಮಾಭಿವೃದ್ಧಿ ಸಂಘ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯದಲ್ಲಿ ಒಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಈ) ಸದರಿ ನೌಕರರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಬಗ್ಗೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮವು ಇವರ ಮೇಲೆ ಇರುವ ಆಪಾದನೆಗಳ ಬಗ್ಗೆ ಪರಿಶೀಲಿಸುತ್ತಿದೆ.

ಮೈಸೂರು ಕೃಷ್ಣರಾಜಸಾಗರ ರಸ್ತೆಯನ್ನು ಜೋಡಿ ರಸ್ತೆ ಮಾಡುವ ಬಗ್ಗೆ

೧೯೮. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಿಂದ ಕೃಷ್ಣರಾಜಸಾಗರವನ್ನು ಸೇರುವ ರಸ್ತೆಯ ಇಬ್ಬದಿಯಲ್ಲಿ ಅನೇಕ ಕೈಗಾರಿಕೆಗಳು ಪ್ರಾರಂಭವಾದಾಗಿನಿಂದ ರಸ್ತೆಯಲ್ಲಿ ಸಂಚಾರ ಒತ್ತಡ ಹೆಚ್ಚಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಅ) ಮೈಸೂರು ನಗರ ಮಂತ್ತು ಬೃಂದಾವನ ವೀಕ್ಷಿಸಲಿರುವ ಪ್ರವಾಸಿಗರೂ ಸೇರಿ, ನಿತ್ಯವೂ ಸಾವಿರಾರು ವಾಹನಗಳು ಓಡಾಡುತ್ತಿದ್ದು, ಆ ರಸ್ತೆ ಕಿರಿದಾಗಿರುವುದರಿಂದ ಅನೇಕ ಅಪಘಾತಗಳು ಸಂಭವಿಸುತ್ತಿರುವುದು ನಿಜವೆ?

ಇ) ಸದರೀ ರಸ್ತೆಯನ್ನು ಅಗಲ ಮಾಡುವುದಲ್ಲದೆ ಅದನ್ನು ಎರಡು ಭಾಗ ಮಾಡಿ, ಹೋಗಿ ಬರುವ ವಾಹನಗಳು ಪ್ರತ್ಯೇಕವಾದ ರೀತಿಯಲ್ಲಿ ಚಲಿಸುವಂತೆ ಮಾಡುವುದಲ್ಲದೆ ಕಾರ್ಖಾನೆಗಳು ಮತ್ತು ಅಕ್ಕಪಕ್ಕ ಗ್ರಾಮಗಳಿರುವಲ್ಲಿ ಪಾದಚಾರಿಗಳು ರಸ್ತೆ ದಾಟುವ ಗುರುತು ಪಟ್ಟಿ ಮಾಡಲು ಸರ್ಕಾರ ದವರು ನಿಗದಿಪಡಿಸುವರೆ?

ಈ) ಈ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿವೆಯೆ?

ಉ) ಆದಷ್ಟು ತ್ವರಿತವಾಗಿ ಸರ್ಕಾರದವರು ಸದರಿ ಕೆಲಸ ಕೈಗೊಂಡು ಸಂಭವಿಸುತ್ತಿರುವ ಅಪಘಾತಗಳನ್ನು ತಡೆಗಟ್ಟುವರೇ?

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಗಮನಕ್ಕೆ ಬಂದಿದೆ.

ಆ) ಮತ್ತು ಇ) ಈ ರಸ್ತೆಯಲ್ಲಿ ಆಗಾಗ್ಗೆ ಅಪಘಾತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಈ ರಸ್ತೆಗೆ ಅಭಿವೃದ್ಧಿ ಮಾಡುವ ಅವಶ್ಯಕತೆ ಇದೆ.

ಈ) ಬಂದಿವೆ.

ಉ) ಈ ರಸ್ತೆ ಅಭಿವೃದ್ಧಿ ಮೊದಲನೆ ಹಂತವಾಗಿ ೦.೦ ಕಿ.ಮಿ ನಿಂದ ೪.೦ ಕಿ.ಮಿ ಭಾಗದ ರಸ್ತೆಯನ್ನು ಸಿ. ಆರ್. ಎಫ್. ನಿಧಿಯಿಂದ ೬೦ ಲಕ್ಷ ರೂಗಳ ವೆಚ್ಚದಲ್ಲಿ ಜೋಡಿ ರಸ್ತೆಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಒಪ್ಪಿಗೆ ಬಂದ ಮೇಲೆ ಕೆಲಸ ಪ್ರಾರಂಭಿಸಲಾಗುವುದು. ರಸ್ತೆಯ ಇನ್ನುಳಿದ ಭಾಗವನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸಿ, ಅಭಿವೃದ್ಧಿಪಡಿಸುವ ಕೆಲಸವನ್ನು ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಗಣಿಸಲಾಗುವುದು.

ಭದ್ರಾ ಮೇಲ್ದಂಡೆ ಹಾಗೂ ನೇತ್ರಾವತಿಗಳ ನೀರಾವರಿ ಯೋಜನೆ.

೨೬೮. ಶ್ರೀ ಬಿ. ಲಕ್ಕಪ್ಪ. (ಚಿಕ್ಕನಾಯಕನ ಹಳ್ಳಿ).—ಮಾನ್ಯ ಲೋಕೋಪಯೋಗಿ ಮಂತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಸಾಲಿನಲ್ಲಿ ಭದ್ರಾ ಮೇಲ್ದಂಡೆ ಹಾಗೂ ನೇತ್ರಾವತಿ ನೀರಾವರಿ ಯೋಜನೆಗಳ ಯೋಜನಾ ವರದಿಯಂನ್ನು ತಯಾರಿಸಿ ಕೇಂದ್ರ ಸರ್ಕಾರದವರ ಮಂಜೂರಾತಿಗಾಗಿ ಕಳುಹಿಸಲಾಗು ವುದು ಎಂದು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದು ನಿಜವೆ?

ಆ) ಹಾಗಿದ್ದಲ್ಲಿ, ಸದರಿ ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಎಂದು ಕಳುಹಿಸ ಲಾಯಿತು;

ಇ) ಎರಡೂ ನೀರಾವರಿ ಯೋಜನೆಗಳಿಗಾಗಿ ತೊಡಗಿಸಲಾಗುವ ಹಣವೆಷ್ಟು ಮತ್ತು ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ? (ಪ್ರತ್ಯೇಕ ವಿವರ ಒದಗಿಸಬೇಕಾಗಿ ವಿನಂತಿ)

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ತು ನೀರಾವರಿ ಮಂತ್ರಿಗಳು).—

ಅ) ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಆಶ್ವಾಸನೆ ನೀಡಿದ್ದು ನಿಜ

ಆ) ಕಳುಹಿಸಿಲ್ಲ.

ಇ) ೧) ಅಂದಾಜುಗಳು ಮಂಜೂರಾದ ನಂತರ ರಾಜ್ಯದ ಸಂಪನ್ಮೂಲಗಳನ್ನು ಅವಲಂಬಿಸಿ ಹಣವನ್ನು ಒದಗಿಸಲಾಗುವುದು.

೨) ವರದಿಗಳು ಸಿದ್ಧವಾದ ನಂತರವೇ ನೀರಾವರಿ ಆಗುವ ವಿಸ್ತೀರ್ಣವನ್ನು ನಿರ್ಧರಿಸಲಂ ಸಾಧ್ಯ.